KAKB620002672020

Presented on : 28-07-2020
Registered on : 28-07-2020
Decided on : 29-05-2026
Duration : 5 years, 10 months, 1 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಉಪಸ್ಥಿತರುಃ**
**ಶ್ರೀ ಕಾಶಿನಾಥ ವಿ. ಉಪ್ಪಾರ್**
ಬಿ.ಎಸ್.ಸಿ. ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ

**ಸಿ.ಸಿ.ನಂ.145/2020**

**ದಿನಾಂಕಃ 29ನೇ ಮೇ -2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಯಡ್ರಾಮಿ ಪೊಲೀಸರಿಂದ
**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ** ದೇವೀಂದ್ರಪ್ಪ ತಂದೆ ಹುಲಕನವರ,
ವಃ 36 ವರ್ಷ, ಉಃ ವ್ಯಾಪಾರ
ಸಾಃ ಕೋಣಸಿರಸಗಿ, ತಾಃ ಯಡ್ರಾಮಿ

**(ಆರೋಪಿತರ ಪರ ಶ್ರೀ ವಿ.ಎಸ್.ಎನ್, ವಕೀಲರು)**

1. ಪ್ರಕರಣ ನಡೆದ ದಿನಾಂಕ : 02-08-2019
2. ಪ್ರಕರಣ ದಾಖಲಾದ ದಿನಾಂಕ : 02-08-2019
3. ಆರೋಪಿತರನ್ನು ಬಂಧಿಸಿದ ದಿನಾಂಕ: --
4. ಫಿರ್ಯಾದಿದಾರರ ಹೆಸರು : ಪುಲ್ಲಯ್ಯಾ ರಾಠೋಡ ಪಿ ಎಸ್ ಐ

KAKB620002672020

5. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕಃ 03-10-2022

6. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕಃ 10-02-2026

7. ಅಪಾದನೆಗಳು : ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ.

8. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**ತೀರ್ಪು**

ಯಡ್ರಾಮಿ ಪೊಲೀಸ ಇವರು ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ದಿನಾಂಕ 02-08-2019 ರಂದು ಸಾಯಂಕಾಲ 4-30 ಗಂಟೆ ಸಮಯದಲ್ಲಿ ಯಡ್ರಾಮಿ ತಾಲೂಕಿನ ಕೋಣಶಿರಸಗಿ ಗ್ರಾಮದಲ್ಲಿ ಆರೋಪಿತನು ಅಂಬಿಗರ ಚೌಡಯ್ಯ ವೃತ್ತದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸರಕಾರದಿಂದ ಯಾವುದೇ ಅಧೀಕೃತ ಪರವಾನಿಗೆಯನ್ನು ಪಡೆಯದೆ ಕಾನೂನು ಬಾಹಿರವಾಗಿ 90 ಎಂ ಎಲ್ ಅಳತೆಯ 80 ಓರಿಜನಲ್ ಚಾಯ್ಸ ವಿಸ್ಕಿ ಪೌಚಗಳನ್ನು ಮತ್ತು 330 ಎಂ.ಎಲ್ ನ ನಾಕೌಟ್ ಬಿಯರ ಬಾಟಲಿಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾಗ

ಅಬಕಾರಿ ಅಧಿಕಾರಿಯವರು ದಾಳಿ ಮಾಡಿದಾಗ ಆರೋಪಿಯಾದ ನೀವು ಓಡಿ ಹೋಗಿರುತ್ತೆರೆಂದು ಆರೋಪಿತನ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಯಡ್ರಾಮಿ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.86/2019 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತನ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತನ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಆರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತನಿಗೆ ನೀಡಿ, ಆರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಆರೋಪಣೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾನೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದಿಸಿದ ಮೇಲಿನ ಅಪರಾಧಗಳನ್ನು ಸಾಬೀತು ಪಡಿಸಲು ಪ್ರಾಸಾ-1 ರಿಂದ 5 ಜನರ ಸಾಕ್ಷಿಗಳ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 5 ದಾಖಲೆಗಳನ್ನು ಹಾಗೂ ಎರಡು

ಮುದ್ದೆ ಮಾಲುನ್ನು ಮು ಮಾ-1 ಮತ್ತು 2 ಎಂದು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ದ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತನು ತನ್ನ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

7. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 02-08-2019 ರಂದು ಸಾಯಂಕಾಲ 4-30 ಗಂಟೆ ಸಮಯದಲ್ಲಿ ಯಡ್ರಾಮಿ ತಾಲೂಕಿನ ಕೋಣಶಿರಸಗಿ ಗ್ರಾಮದಲ್ಲಿ ಆರೋಪಿಯಾವು ನೀವು ಅಂಬಿಗರ ಚೌಡಯ್ಯ ವೃತ್ತದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸರಕಾರದಿಂದ ಯಾವುದೇ ಅಧೀಕೃತ ಪರವಾನಿಗೆಯನ್ನು ಪಡೆಯದೆ ಕಾನೂನು ಬಾಹಿರವಾಗಿ 90 ಎಂ ಎಲ್ ಅಳತೆಯ 80 ಓರಿಜನಲ್ ಚಾಯ್ಸ ವಿಸ್ಕ ಪೌಚಗಳನ್ನು ಮತ್ತು 330 ಎಂ.ಎಲ್ ನ ನಾಕೌಟ್ ಬಿಯರ ಬಾಟಲಿಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾಗ ಅಬಕಾರಿಅಧಿಕಾರಿಯವರು ದಾಳಿ ಮಾಡಿದಾಗ ಆರೋಪಿಯಾದನೀವು ಓಡಿ ಹೋಗಿರುತ್ತೆರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 : ನಕರಾತ್ಮಕವಾಗಿ.

ಅಂಶ ನಂ.4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

9. **ಅಂಶ ನಂ.1:-** ಈ ಪ್ರಕರಣದಲ್ಲಿ ಚಾಸಾ-1 ರವರು ಪಿರ್ಯಾದಿದಾರರಾಗಿದ್ದು, ಚಾಸಾ-1 ರವರಿಗೆ ಈ ನ್ಯಾಯಾಲಯವು ಸಾಕಷ್ಟು ಬಾರಿ ಸಮನ್ಸ ಜಾರಿಮಾಡಿದರೂ ಸಹಿತ ಚಾಸಾ-1ರವರು ನ್ಯಾಯಾಲಯಕ್ಕೆ ಹಾಜರು ಆಗದ ಕಾರಣ ಚಾಸಾ-1 ರವರ ಸಾಕ್ಷಿಯನ್ನು ಕೈಬಿಡಲಾಗಿದೆ.

10. ಚಾಸಾ-2 ಮತ್ತು ಚಾಸಾ-3 ಇವರು ಈ ಪ್ರಕರಣದ ಜಪ್ತಿ ಪಂಚರಾಗಿದ್ದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿ ತಮಗೆ ಈ ಪ್ರಕರಣದ ಯಾವುದೇ ಮಾಹಿತಿ ಇಲ್ಲವೆಂದು ಸಾಕ್ಷಿ ಹೇಳುತ್ತಾರೆ. ಸಹಾಯಕ ಸರಕಾರಿ ಅಭಿಯೋಜಕರು ಚಾಸಾ-2 ಮತ್ತು ಚಾಸಾ-3 ಅವರನ್ನು ಪಾಟಿ ಸವಾಲಿಗೊಳಪಡಿಸಿದಾಗ ಯಾವುದೇ ಪೂರಕವಾದ ಅಂಶಗಳು ದೊರೆತಿರುವುದಿಲ್ಲ.

11. ಚಾಸಾ-7/ಪ್ರಾಸಾ-5 ಶಿವಪ್ಪ ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 02-08-2019 ರಂದು ತಾನು, ಚಾಸಾ-1, 4 ರಿಂದ 6 ಅವರು ಕಡಕೋಳ ಗ್ರಾಮದ ಅಂಬಿಗೇರ ಚೌಡಯ್ಯ ವೃತ್ತದ ಹತ್ತಿರ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-1 ಅವರು ಕೋಣಸಿರಸಗಿ ಗ್ರಾಮದ ಅಂಬಿಗೇರ ಚೌಡಯ್ಯ ವೃತ್ತದ ಹತ್ತಿರ ಒಬ್ಬ ವ್ಯಕ್ತಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆಂಬ ಖಚಿತ ಮಾಹಿತಿ ಬಂದಿರುತ್ತದೆ, ದಾಳಿ ಮಾಡಬೇಕೆಂದು ನಮಗೆ ತಿಳಿಸಿದರು, ನಂತರ ಅಲ್ಲಿ ಇದ್ದ ಇಬ್ಬರು ವ್ಯಕ್ತಿಗಳನ್ನು ಪಂಚರನ್ನಾಗಲು ಕೋರಿದ್ದು, ಅವರ ಒಪ್ಪಿಕೊಂಡ ಮೆರೆಗೆ ತಾನು, ಚಾಸಾ-1 ರಿಂದ 6 ಅವರು ಕಡಕೂಳದಿಂದ ಕೋಣಸಿರಸಗಿ ಗ್ರಾಮಕ್ಕೆ ಇಲಾಖೆ ವಾಹನದಲ್ಲಿ

ಸಾಯಂಕಾಲ 4-30 ಗಂಟೆಗೆ ಕೋಣಸಿರಸಗಿ ಗ್ರಾಮದ ಅಂಬಿಗೇರ ಚೌಡಯ್ಯ ವೃತ್ತದ್ದ ಹತ್ತಿರ ಹೋಗಿ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ರಟ್ಟಿನ ಬಾಕ್ಸನಲ್ಲಿ ಮದ್ಯವನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದನು, ನಮ್ಮನ್ನು ನೋಡಿ ಸದರಿ ಬಾಕ್ಸನ್ನು ಅಲ್ಲಿಯೇ ಬಿಟ್ಟು ಓಡಿ ಹೋದನು, ನಂತರ ಸದರಿ ರಟ್ಟಿನ ಬಾಕ್ಸನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ಅಳತೆಯ 80 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, ಮತ್ತು 330 ಎಂ ಎಲ್ ಅಳತೆಯ 05 ನಾಕಔಟ ಬಿಯರ ಬಾಟಲಿಗಳು ದೊರೆತವು, ಅವುಗಳಲ್ಲಿ ಕೆಲವು ರಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ ಅರಗಿನಿಂದ ಸಿಲ್ ಮಾಡಿಲಾಯಿತು, ಅವುಗಳ ಮೇಲೆ ಪಂಚರ ಸಹಿ ಮಾಡಿದ ಚೀಟಿಳನ್ನು ಅಂಟಿಸಲಾಯಿತು, ನಂತರ ಚಾಸಾ-1 ಅವರು ಸಾಯಂಕಾಲ 4-30 ರಿಂದ 5-30 ರವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ದೇವೀಂದ್ರ ತಂದೆ ರೇವಣ್ಣ ಎಂದು ತಿಳಿಸಿದರು, ನಂತರ ಮುದ್ದೆಮಾಲು, ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾಸಾ-1 ಅವರು ಠಾಣೆಧಿಕಾರಿಗೆ ಜ್ಞಾಪನಾ ಪತ್ರ ಮತ್ತು ಮುದ್ದೆ ಮಾಲನ್ನು ಮುಂದಿನ ಕ್ರಮಕ್ಕಾಗಿ ನೀಡಲಾಯಿತು ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿಪರ ವಕೀಲರು ಚಾಸಾ-7 ರವರು ಘಟನಾ ಸ್ಥಳಕ್ಕೆ ಹೋಗಿಲ್ಲ, ಮುಂದುವರೆದು ಯಾವುದೇ ಮದ್ಯವನ್ನು ವಶಪಡಿಸಿಕೊಂಡಿಲ್ಲ, ಆರೋಪಿತನ ವಿರುದ್ದ ಸುಳ್ಳು ದೂರನ್ನು ನೀಡಿದ್ದಾರೆಂದು ಮತ್ತು ಆರೋಪಿತನಿಗೂ ಮತ್ತು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

12. ಈ ಪ್ರಕರಣದಲ್ಲಿ ಚಾಸಾ-4 ರಿಂದ ಚಾಸಾ-6 ಅವರು ಈ ಪ್ರಕರಣದಲ್ಲಿ ದಾಳಿಯಲ್ಲಿ ಭಾಗವಹಿಸಿದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಸರಕಾರಿ ಸಹಾಯಕ ಅಭಿಯೋಜಕರ ಕೊರಿಕೆಯ ಮೆರೆಗೆ ಚಾಸಾ-4 ರಿಂದ ಚಾಸಾ-6 ಅವರು

ಸಾಕ್ಷಿಯನ್ನು ಕೈ ಬಿಡಲಾಗಿದೆ.

13. ಚಾಸಾ-8/ಪ್ರಾಸಾ-4 ಶ್ರೀಕಾಂತ ಎ ಎಸ್ ಐ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 21-10-2019 ರಂದು ಚಾಸಾ-1 ಅವರ ಆದೇಶದಂತೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ 90 ಎಂ ಎಲ್ ಅಳತೆಯ 80 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, ಮತ್ತು 330 ಎಂ ಎಲ್ ಅಳತೆಯ 05 ನಾಕಔಟ ಬಿಯರ ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ನಾಗನಳ್ಳಿ ಕಲಬುರಗಿಗೆ ಹೋಗಿ ಆ ಕುರಿತು ವರದಿ ಸಲ್ಲಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆಸಹಾಯವಾಗುವ ಯಾವುದೇ ಪೂರಕಾಂಶಗಳು ದೊರೆತಿರುವುದಿಲ್ಲ.

14. ಈ ಪ್ರಕಣದಲ್ಲಿ ಚಾಸಾ-9 ಅವರು ರಸಾಯನಿಕ ಪರೀಕ್ಷಾ ವರದಿ ನೀಡಿದ ಸಾಕ್ಷಿದಾರರಾಗಿದ್ದು ಆರೋಪಿ ಪರ ವಕೀಲರ ಒಪ್ಪಿಗೆಯ ಮೆರೆಗೆ ರಸಾಯನಿಕ ಪರೀಕ್ಷಾ ವರದಿಯನ್ನು ನಿಪಿ-4 ಎಂದು ಗುರುತಿಸಿದ್ದು ಸದರಿ ಸಾಕ್ಷಿಯನ್ನು ಸಹಾಯಕ ಸರಕಾರಿ ಅಭಿಯೋಜಕರ ಕೋರಿಕೆಯ ಮೆರೆಗೆ ಕೈ ಬಿಡಲಾಗಿದೆ.

15. ಚಾಸಾ-10/ಪ್ರಾಸಾ-3 ಮೌಲಾಲಿ ಅಬಕಾರಿ ಪೆದೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 02-08-2019 ಸಾಯಂಕಾಲ 07-00 ಗಂಟೆಗೆ ತಾನು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಠಾಣೆಗೆ ಹಾಜರಾಗಿ ನೀಡಿದ ಜಪ್ತಿ ಪಂಚನಾಮೆ, ಮುದ್ದೆ ಮಾಲು ಮತ್ತು ವರದಿಯನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಅದೇ ದಿನ ಚಾಸಾ-4 ರಿಂದ 7 ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ, ದಿನಾಂಕ 21-10-2019 ರಂದು ಚಾಸಾ-8 ಅವರ ಮುಖಾಂತರ ಎರಡು ಬೀರ ಬಾಟಲಿಗಳು ಹಾಗೂ ಒಂದು ಓರಿಜನಲ್ ಚಾಯ್ಸ ವಿಸಕಿಯ ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ

ಕಳುಹಿಸಿರುತ್ತೇನೆ, ದಿನಾಂಕ 10-01-2020 ರಂದು ರಸಾಯನಿಕ ವರದಿಯನ್ನು ಸ್ವೀಕರಿಸಿರುತ್ತೇನೆ, ಅದೇ ದಿನ ತನಿಖೆ ಮುಗಿಸಿ ಆರೋಪಿಯ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕಾಂಶಗಳು ದೊರೆತಿರುವುದಿಲ್ಲ.

16. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ ಪ್ರಾಸಾ-9 ರ ಸಾಕ್ಷಿಗಳನ್ನು ಪರಿಶೀಲಿಸಿದಾಗ ಚಾಸಾ-2 ಮತ್ತು 3 ರವರು ಅವರ ಸಮಕ್ಷಮ ಚಾಸಾ-1ರವರು ಜಪ್ತಿ ಪಂಚನಾಮೆ ಮಾಡಿದ್ದು, ಜಪ್ತಿ ಪಂಚನಾಮೆ ಮಾಡಿ 90 ಎಂ ಎಲ್ ಅಳತೆಯ 80 ಓರಿಜನಲ್ ಚಾಯ್ಸ ವಿಸ್ಕಿ ಪೌಚಗಳನ್ನು ಮತ್ತು 330 ಎಂ.ಎಲ್ ನ ನಾಕೌಟ್ ಬಿಯರ ಬಾಟಲಿಗಳನ್ನು ವಶಪಡಿಸಿಕೊಂಡಿರುತ್ತಾರೆಂದು ಜಪ್ತಿ ಪಂಚನಾಮೆಯಲ್ಲಿ ನಮೂದಿಸಲಾಗಿದೆ. ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-1ಎಂದು ಗುರುತಿಸಲಾಗಿರುತ್ತದೆ. ಆದರೆ ಚಾಸಾ-2 ಮತ್ತು 3 ರವರು ಅಭೀಯೋಜನೆಗೆ ಪ್ರತಿಕೂಲವಾಗಿ ತಮ್ಮ ಸಾಕ್ಷಿ ಹೇಳಿದ್ದು, ಈ ಪ್ರಕರಣದಲ್ಲಿ ಪ್ರಮುಖವಾಗಿ ಜಪ್ತಿ ಪಂಚನಾಮೆಯನ್ನು ರುಜುವಾತುಪಡಿಸಲು ಅಭೀಯೋಜನೆಯು ವಿಫಲವಾಗಿರುತ್ತದೆ. ವಶಪಡಿಸಿಕೊಂಡ ಮಧ್ಯದ ಪೌಚಗಳು ಆರೋಪಿಗೆ ಸಂಬಂಧಿಸಿದ್ದವು ಎಂದು ಮತ್ತು ಸದರಿ ಪೌಚಗಳು ಆರೋಪಿಯ ವಶದಲ್ಲಿ ಇತ್ತು ಎಂದು ರುಜುವಾತು ಪಡಿಸಲು ಅಭೀಯೋಜನೆಯು ವಿಫಲವಾಗಿರುತ್ತದೆ. ಚಾಸಾ-4 ಈ ಪ್ರಕರಣದಲ್ಲಿ ದಾಳಿ ಮಾಡಿದದಿ ಮತ್ತು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಸದರಿ ಸಾಕ್ಷಿದಾರರ ಹೇಳಿಕೆಗೂ ಮತ್ತು ಸಾಕ್ಷಿಗೂ, ಈ ಪ್ರಕರಣದಲ್ಲಿ ಜಪ್ತಿ ಪಂಚರಾದ ಚಾಸಾ-2 ಮತ್ತು ಚಾಸಾ-3 ಅವರ ಸಾಕ್ಷಿಯಲ್ಲಿ ಹೊಂದಾಣಿಕೆ ಇಲ್ಲದಿರುವುದು ಕಂಡುಬರುತ್ತದೆ. ಪ್ರಾಸಾ-1

ರಿಂದ ಪ್ರಾಸಾ-5 ಅವರ ಸಾಕ್ಷಿಗಳಿಂದ ಆರೋಪಿತನು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದನೆಂದು ರುಜುವಾತು ಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆರೋಪಿತನ ವಿರುದ್ದ ಮಾಡಲಾದ ಆರೋಪವು ಸಂಶಯಾತೀತವಾಗಿ ರುಜುವಾತು ಪಡಿಸಲು ಅಭಿಯೋಜನೆ ಅವರು ವಿಫಲರಾಗಿರುತ್ತಾರೆ. ಆದ್ದರಿಂದ ಕಾನೂನಿನ ನಿರ್ಧರಿತ ತತ್ವಗಳಂತೆ ಅಭಿಯೋಜನೆಯ ಪ್ರಕರಣದಲ್ಲಿ ಸಂಶಯವಿದ್ದಲ್ಲಿ, ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ಸಲ್ಲತಕ್ಕದ್ದು. ಸದರಿ ಪ್ರಕರಣದ ವಸ್ತುಸ್ಥಿತಿಯನ್ನು ಪರಿಶೀಲಿಸಿದಾಗ, ಅಭಿಯೋಜನೆಯು ಆರೋಪಿತರು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಾರೆಂಬುದನ್ನು ಸಂಶಯಾತೀತವಾಗಿ ಸಾಭೀತು ಪಡಿಸುವಲ್ಲಿ ವಿಫಲವಾಗಿರುತ್ತದೆ. ಕಾರಣ ಅಂಶ ನಂ.1 ನೇದ್ದನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

17. **ಅಂಶ ನಂ.2:-** ಅಂಶ ನಂ.1 ನೇದ್ದನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**ಆ ದೇ ಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತನನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.

ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮು ಮಾ-1 ನ್ನು ಮೌಲ್ಯರಹಿತಿವಾಗಿರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ಮೇಲೆ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 29ನೇ ಮೇ 2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

## ಅನುಬಂಧ

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

ಪಿ.ಡಬ್ಲ್ಯೂ-1 : ಸಂಗನಗೌಡ ತಂದೆ ಸೋಮರಾಯಗೌಡ

ಪಿ.ಡಬ್ಲ್ಯೂ-2 : ಬಸಲಿಂಗಪ್ಪ ತಂದೆ ಭಗವಂತರಾಯ

ಪಿ.ಡಬ್ಲ್ಯೂ-3 : ಮೌಲಾಲಿ ತಂದೆ ಅಲ್ಲಾಭಕ್ಷ ಮುಖ್ಯ ಪೇದೆ

ಪಿ.ಡಬ್ಲ್ಯೂ-4 : ಶ್ರೀಕಾಂತ ತಂದೆ ರಾಮು ಎ ಎಸ್ ಐ

ಪಿ.ಡಬ್ಲ್ಯೂ-5 : ಶಿವಪ್ಪ ತಂದೆ ಹಳ್ಳೆಪ್ಪಗೊಳ ಮುಖ್ಯ ಪೇದೆ

**ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ನಿ.ಪಿ.1 : ಪಂಚನಾಮೆ
ನಿ.ಪಿ.1 (ಎ) : ಪ್ರಾಸಾ-1 ರವರ ಸಹಿ
ನಿ.ಪಿ.1 (ಬಿ) : ಪ್ರಾಸಾ-2 ರವರ ಸಹಿ

KAKB620002672020

| | | | |
|---|---|---|---|
| ನಿ.ಪಿ.2 | | : | ವರದಿ |
| ನಿ.ಪಿ.2 | (ಎ) | : | ಪ್ರಾಸಾ-3 ರವರ ಸಹಿ |
| ನಿ.ಪಿ.3 | | : | ಪ್ರಥಮ ವರ್ತಮಾನ ವರದಿ |
| ನಿ.ಪಿ.3 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.4 | | : | ರಸಾಯನಿಕ ಪರೀಕ್ಷಾ ವರದಿ |
| ನಿ.ಪಿ.4 | (ಎ) | : | ಪ್ರಾಸಾ-3 ರವರ ಸಹಿ |
| ನಿ.ಪಿ.5 | | : | ವರದಿ |
| ನಿ.ಪಿ.5 | (ಎ) | : | ಪ್ರಾಸಾ-4 ರವರ ಸಹಿ |

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

- ಇಲ್ಲ -

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

ಮುಮಾ-1 : 180 ಎಂ ಎಲ್ ನ ಓರಿಜನಲ್ ಚಾಯ್ಸ ವಿಸ್ಕಿಯ ಟೇಟ್ರಾ ಪ್ಯಾಕೇಟ

ಮುಮಾ-2 : 330 ಎಂ ಎಲ್ ನ  ನಾಕೌಟ ಬಿಯರ ಬಾಟಲಿ

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

Dictated on : 29-05-2026
Transcribed on : 29-05-2026
checked on : 29-05-2026
Signed on : 29-05-2026

KASHINATH VASANT UPPAR

Digitally signed by KASHINATH VASANT UPPAR
Date: 2026.06.06 12:18:29 +0530

(**Kashinath V. Uppar**)
**CIVIL JUDGE JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS